

بسم الله الرّحمٰن الرّحيم

# ಮುಸ್ಲಿಹ್ ಮೌಊದ್ ಭವಿಷ್ಯವಾಣಿ – ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುರವರ ಮೂಲಕ ಈಡೇರಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **19–02–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಹ್ಮದಿಯಾ ಜಮಾಅತ್‌ನಲ್ಲಿ ಫೆಬ್ರವರಿ ದಿನಾಂಕ 20ನ್ನು ಮುಸ್ಲಿಹ್ ಮೌಊದ್ ಭವಿಷ್ಯವಾಣಿಗೆ ಸಂಬಂಧಿಸಿದ್ದಾಗಿ ಪರಿಗಣಿಸಲಾಗುತ್ತಿದೆ. ಹಝುರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಒಬ್ಬ ಮಗನು ಜನಿಸುವ ಬಗ್ಗೆ ಅಲ್ಲಾಹನು ಶುಭವಾರ್ತೆ ನೀಡಿದ್ದನು. ಆ ಮಗನು ಧರ್ಮದ ಸೇವಕನಾಗುವನು, ದೀರ್ಘಾಯುಸ್ಸನ್ನು ಪಡೆಯುವನು ಮತ್ತು ಇತರ ಅನೇಕ ವೈಶಿಷ್ಟ್ಯಗಳನ್ನು ಹೊಂದುವನೆಂದು ಅಲ್ಲಾಹನು ತಿಳಿಸಿದ್ದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಭವಿಷ್ಯ ವಾಣಿಯ ಮಹತ್ವದ ಬಗ್ಗೆ ಹೇಳುತ್ತಾರೆ, ಇದೊಂದು ಭವಿಷ್ಯವಾಣಿ ಮಾತ್ರವಲ್ಲ; ಇದೊಂದು ವೈಭವಶಾಲಿ ದೈವಿಕ ದೃಷ್ಟಾಂತವೂ ಆಗಿದೆ. ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧತೆ ಮತ್ತು ಅವರ ಭವ್ಯತೆಯನ್ನು ಪ್ರಕಟಪಡಿಸಲು ಸರ್ವಶಕ್ತನಾದ ಅಲ್ಲಾಹನು ತೋರಿಸಿದ ಒಂದು ದೃಷ್ಟಾಂತವಾಗಿದೆ. ವಾಸ್ತವಿಕವಾಗಿ ಈ ದೃಷ್ಟಾಂತವು ಒಬ್ಬ ಮೃತನನ್ನು ಜೀವಂತಗೊಳಿಸುವುದಕ್ಕಿಂತ ನೂರಾರು ಪಟ್ಟು ಉನ್ನತವೂ ಪರಿಪೂರ್ಣವೂ ಅನುಗ್ರಹಭರಿತವೂ ಆಗಿದೆ. ಏಕೆಂದರೆ ಮೃತನನ್ನು ಜೀವಂತಗೊಳಿಸುವುದರ ಅರ್ಥ ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸಿ ಒಂದು ಆತ್ಮವನ್ನು ಮರಳಿ ತರಿಸುವುದಾಗಿದೆ. ಆದರೆ ಇಲ್ಲಿ ನಡೆದುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹ ಮೂಲಕ ಅಲ್ಲಾಹನು ಈ ವಿನೀತನ ಪ್ರಾರ್ಥನೆ ಅಂಗೀಕರಿಸಿ ಎಂತಹ ಅನುಗ್ರಹಭರಿತ ಆತ್ಮವನ್ನು ಲೋಕಕ್ಕೆ ಕಳುಹಿಸುವ ವಾಗ್ದಾನ ನೀಡಿದನೆಂದರೆ ಆ ಆತ್ಮದ ಬಾಹ್ಯ ಮತ್ತು ಆಂತರಿಕ ಅನುಗ್ರಹಗಳು ಭೂಮಿಯಲ್ಲಿ ಎಲ್ಲಾ ಕಡೆಗಳಲ್ಲೂ ಹಬ್ಬುವುದು. ಈ ದೃಷ್ಟಾಂತ ಬಾಹ್ಯವಾಗಿ ನೋಡಿದರೆ ಮೃತರನ್ನು ಜೀವಂತಗೊಳಿಸುವುದಕ್ಕೆ ಸಮಾನವಾಗಿ ಕಂಡರೂ ಚಿಂತಿಸಿ ನೋಡುವುದಾದರೆ ಈ ದೃಷ್ಟಾಂತ ಮೃತರನ್ನು ಜೀವಂತಗೊಳಿಸುವುದಕ್ಕಿಂತ ನೂರಾರು ಪಟ್ಟು ಶ್ರೇಷ್ಠವಾಗಿದೆ.

ಅನಂತರ ನಮ್ಮವರು ಮತ್ತು ಅನ್ಯರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಕಟಿಸಿದ ಈ ಭವಿಷ್ಯವಾಣಿ ಬಹಳ ವೈಭವದಿಂದ ಈಡೇರಿದುದಾಗಿ ಕಂಡರು. ಈ ಭವಿಷ್ಯವಾಣಿಯು ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್, ಖಲೀಫತುಲ್ ಮಸೀಹ್ ಸಾನಿಗೆ ಸಂಬಂಧಿಸಿದ್ದೆಂದು ಕಾಲವು ಸಾಬೀತುಗೊಳಿಸಿತು. ಜಮಾಅತಿನ ವಿದ್ವಾಂಸರು ಮತ್ತು ಜನರು ಅವರೇ ಮುಸ್ಲಿಹ್ ಮೌಊದ್ ಎಂದು ದೃಢನಂಬಿಕೆ ಹೊಂದಿದ್ದರು. ಆದರೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಈ ಭವಿಷ್ಯವಾಣಿ ತನಗೆ ಸಂಬಂಧಿಸಿದೆ ಎಂದು ಖಲೀಫರಾಗಿ ಮೂವತ್ತು ವರ್ಷಗಳ ಕಾಲ ಎಂದೂ ವಾದಿಸಿರಲಿಲ್ಲ. ಕೊನೆಗೆ 1944ರಲ್ಲಿ ನಾನೇ ಮುಸ್ಲಿಹ್ ಮೌಊದ್ ಎಂದು ಅವರು ಪ್ರಕಟಿಸಿದರು.

ನಾನು ಇಂದು ಈ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್(ರ) ನೀಡಿದ ಎರಡು ಖುತ್‌ಬಗಳಿಂದ ಸಂಕ್ಷಿಪ್ತವಾಗಿ ಅವರದೇ ಶಬ್ದಗಳಲ್ಲಿ ವಿವರಿಸುವೆನು. 1944 ಜನವರಿ 28ರ ಖುತ್‌ಬದಲ್ಲಿ ಅವರು ಹೀಗೆ ಹೇಳಿದರು: ನಾನು ಈ ದಿನ ಒಂದು ವಿಷಯ ಹೇಳಲು ಬಯಸುತ್ತೇನೆ. ನನ್ನ ಪ್ರಕೃತಿಗೆ ಅನುಸಾರವಾಗಿ ಅದನ್ನು ಹೇಳುವುದಕ್ಕೆ ಸಂಕೋಚಪಡುತ್ತೇನೆ. ಆದರೆ ಅಲ್ಲಾಹನ ವಿಧಿ ನಿರ್ಣಯ ಈ ವಿಷಯದ ವಿವರಣೆಗೆ ಸಂಬಂಧಿಸಿರುವುದರಿಂದ ನನಗೆ ಸಂಕೋಚವಾಗುವುದಾದರೂ ನಾನು ಅದನ್ನು ಹೇಳದೆ ಇರಲು ಸಾಧ್ಯವಿಲ್ಲ.

ಅನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮ ದೀರ್ಘವಾದ ಒಂದು ಸ್ವಪ್ನವನ್ನು ವಿವರಿಸಿ ಅದರ ವ್ಯಾಖ್ಯಾನ ಮಾಡುತ್ತಾ ಹೀಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮುಸ್ಲಿಹ್ ಮೌಊದ್ ಬಗ್ಗೆ ಪ್ರಕಟಿಸಿದ ಭವಿಷ್ಯವಾಣಿ ನನ್ನ ಬಗ್ಗೆ ಎಂದು ವಿಧಿಸಲ್ಪಟ್ಟಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಪುನಃ ಹೇಳಿದರು:

ಜನರು ನನ್ನೊಂದಿಗೆ ಪದೇ ಪದೇ ವಿಚಾರಿಸುತ್ತಿದ್ದರು. ಈ ಭವಿಷ್ಯ ವಾಣಿಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನೆಂದು. ಆದರೆ ನನ್ನ ಸ್ಥಿತಿ ಹೇಗಿತ್ತೆಂದರೆ ನಾನು ಆ ಭವಿಷ್ಯವಾಣಿಗಳನ್ನು ಲಕ್ಷ್ಯವಿಟ್ಟು ಓದಲು ಸಹ ಪ್ರಯತ್ನಿಸಲಿಲ್ಲ. ನನ್ನ ಮನಸ್ಸು ನನಗೆ ಮೋಸ ಮಾಡದಿರಲಿ ಮತ್ತು ನಾನು ನನ್ನ ಬಗ್ಗೆ ಅವಾಸ್ತವಿಕವಾಗಿ ಏನನ್ನಾದರೂ ಯೋಚಿಸುವಂತಾಗದಿರಲಿ ಎಂದು ನಾನು ಭಾವಿಸುತ್ತಿದ್ದೆ.

ನೋಡಿರಿ, ಹಝ್ರತ್ ಮುಸ್ಲಿಹ್ ಮೌಊದ್(ರ) ತಾನೇ ಈ ಭವಿಷ್ಯವಾಣಿಯ ಪೂರ್ತೀಕರಣವಾಗಿದ್ದು ಕೂಡ ತನ್ನ ವಾದ ಪ್ರಕಟಿಸಲು ಎಷ್ಟು ಜಾಗರೂಕತೆಯಿಂದ ವರ್ತಿಸಿದರು. ಆದರೆ ತಲೆ ತಿರುಗಿದ ಜನರು ಯಾವುದೇ ಚಿಹ್ನೆ ಪ್ರಕಟವಾಗದಿದ್ದರೂ ವಾದಿಸುತ್ತಾರೆ. ಅಂತಹ ಜನರನ್ನು ಹುಚ್ಚರೆಂದು ಹೇಳಬೇಕಲ್ಲದೆ ಬೇರೆ ಏನು ಹೇಳಲು ಸಾಧ್ಯ? ಈ ಭವಿಷ್ಯ ವಾಣಿಯ ಬಗ್ಗೆ ತನ್ನ ಸಂಕೋಚ ಮತ್ತು ಹಿಂಜರಿಕೆಯನ್ನು ಪ್ರಕಟಿಸುತ್ತಾ ಒಂದು ಕಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರು ಒಮ್ಮೆ ನನಗೆ ಒಂದು ಪತ್ರ ನೀಡಿ ಹೇಳಿದರು, ಇದು ನಿನ್ನ ಜನನದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನನಗೆ ಬರೆದ ಒಂದು ಪತ್ರವಾಗಿದೆ. ಇದನ್ನು **"ತಶ್‌ಹೀಝುಲ್ ಅಝ್‌ಹಾನ್"** ಪತ್ರಿಕೆಯಲ್ಲಿ ಪ್ರಕಟಿಸು ಎಂದು ಹೇಳದರು. ನಾನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಮಾತಿಗೆ ಗೌರವ ನೀಡಿ ಅದನ್ನು ಪ್ರಕಟಿಸಿದೆ. ಆದರೆ ಆಗ ಸಹ ನಾನು ಆ ಪತ್ರವನ್ನು ಲಕ್ಷ್ಯವಿಟ್ಟು ಓದಲಿಲ್ಲ. ಆ ಪತ್ರ ಪ್ರಕಟವಾದಾಗ ಜನರು ಅನೇಕ ವಿಧಗಳಲ್ಲಿ ಮಾತನಾಡಿದರು. ಆದರೆ ನಾನು ಮೌನವಾಗಿದ್ದೆ ನಾನು ಇಷ್ಟು ಮಾತ್ರ ಹೇಳುತ್ತಿದ್ದೆ: ಯಾರ ಬಗ್ಗೆ ಈ ಭವಿಷ್ಯವಾಣಿ ಪ್ರಕಟಿಸಲಾಗಿದೆಯೋ ಆ ಉದ್ದೇಶಿತ ವ್ಯಕ್ತಿ, ತಾನೇ ಆ ಭವಿಷ್ಯವಾಣಿಯ ಪೂರ್ತೀಕರಣ ಎಂದು ಹೇಳಬೇಕಾದ ಆವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದೆ. ಜನರು ಅನೇಕ ಭವಿಷ್ಯವಾಣಿಗಳನ್ನು ನನ್ನ ಮುಂದೆ ಇರಿಸಿ ಒತ್ತಾಯ ಪೂರ್ವಕವಾಗಿ ಈ ಭವಿಷ್ಯವಾಣಿಗಳು ನಿಮ್ಮನ್ನು ಸತ್ಯಪಡಿಸುತ್ತವೆ ಎಂದು ಘೋಷಿಸಬೇಕಾಗಿ ಹೇಳುತ್ತಿದ್ದರು. ಆದರೆ ನಾನು ಯಾವಾಗಲೂ ಹೀಗೆ ಹೇಳುತ್ತಿದ್ದೆ. ಭವಿಷ್ಯವಾಣಿಯನ್ನು ಯಾರ ಬಗ್ಗೆ ಪ್ರಕಟಿಸಲಾಗಿದೆ ಎನ್ನುವುದು ತಾನಾಗಿ ಪ್ರಕಟವಾಗುವುದು. ಈ ಭವಿಷ್ಯವಾಣಿ ನನ್ನ ಬಗ್ಗೆಯಾಗಿದ್ದರೆ, ಅದು ನನಗೆ ಸಂಬಂಧಿಸಿದೆ ಎಂದು ಕಾಲವು ತಾನಾಗಿ ತಿಳಿದು ಕೊಳ್ಳುವುದು. ಅಥವಾ ಈ ಭವಿಷ್ಯವಾಣಿ ನನಗೆ ಸಂಬಂಧಿಸಿಲ್ಲವಾದರೆ ಕಾಲದ ಸಾಕ್ಷ್ಯವು ನನ್ನ ವಿರುದ್ಧವಾಗಿರುವುದು. ಈ

ಎರಡು ಸಂದರ್ಭಗಳಲ್ಲೂ ನಾನೇನೂ ಹೇಳಬೇಕಾಗಿರುವುದಿಲ್ಲ. ನಾನು ತ್ವರೆ ಪಡಬೇಕಾದ ಆವಶ್ಯಕತೆಯೂ ಇಲ್ಲ. ಅಲ್ಲಾಹನು ಸ್ವತಃ ಸತ್ಯವನ್ನು ಪ್ರಕಟಿಸುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಇಲ್‌ಹಾಮ್ ಹೀಗಿತ್ತು: **ಉನೋನೆ ಕಹಾ ಆನೇವಾಲಾ ಯಹೀ ಹೈ ಯಾ ಹಮ್ ದೂಸ್ರೋಂ ಕಿ ರಾಹ್ ತಕೇಂ** (ಅವರು ಹೇಳಿದರು: ಆಗಮಿಸಬೇಕಾದವನು ಇವನೇ? ಅಥವಾ ನಾವು ಬೇರೆಯವರನ್ನು ಕಾಯಬೇಕೆ?) ಈ ಪ್ರಶ್ನೆಯನ್ನು ಲೋಕದಲ್ಲಿ ಜನರು ಎಷ್ಟು ಸಾರಿ ಕೇಳಿದರು ಎಂದರೆ ದೀರ್ಘಕಾಲ ದಾಟಿ ಹೋಯಿತು. ಈ ದೀರ್ಘಕಾಲದ ಬಗ್ಗೆ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್‌ಗಳಲ್ಲಿ ಪ್ರಸ್ತಾಪವಿದೆ. ಉದಾಹರಣೆಗೆ ಹಝ್ರತ್ ಯಅ್‌ಖೂಬರೊಂದಿಗೆ ಹಝ್ರತ್ ಯೂಸುಫ್ ಅಲೈಹಿಸ್ಸಲಾಮರ ಸಹೋದರರು ಹೇಳಿದರು: ನೀವು ಯೂಸಫನ ಬಗ್ಗೆ ಈ ರೀತಿ ಮಾತನಾಡುತ್ತಾ ಮಾತನಾಡುತ್ತಾ ಸಾವಿನ ತನಕ ತಲಪುವಿರಿ ಎಂದು ಹೇಳಿದ್ದರು. ಇದೇ ಇಲ್‌ಹಾಮ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೂ ಅವತೀರ್ಣಗೊಂಡಿತು ಎಂದು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹೀಗೆ ಸಹ ಇಲ್‌ಹಾಮ್ ಅವತೀರ್ಣಗೊಂಡಿತು: **ಯೂಸುಫ್‌ಕಿ ಖುಶ್‌ಬೂ ಮುಝೇ ಆ ರಹೀ ಹೈ.** (ಯೂಸುಫನ ಸುವಾಸನೆ ನನಗೆ ಲಭಿಸುತ್ತಿದೆ.) ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಪದ್ಯದಲ್ಲಿಯೂ ಪ್ರಸ್ತಾಪಿಸಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನ ಇಚ್ಛೆ ಪ್ರಕಾರ ಈ ವಿಷಯ ದೀರ್ಘಕಾಲದ ನಂತರ ಪ್ರಕಟವಾಗಲಿಕ್ಕಿತ್ತು. ಏಕೆಂದರೆ ಹಝ್ರತ್ ಯೂಸುಫ್ ಅಲೈಹಿಸ್ಸಲಾಮರು ದೀರ್ಘಕಾಲದ ನಂತರ ತಮ್ಮ ತಂದೆ ಹಝ್ರತ್ ಯಅ್‌ಖೂಬ್ ಅಲೈಹಿಸ್ಸಲಾಮರನ್ನು ಭೇಟಿಯಾಗಿದ್ದರು ಮತ್ತು ಭವಿಷ್ಯವಾಣಿ ಈಡೇರಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾನು ಹೀಗೆ ದೃಢವಾಗಿ ನಂಬಿದ್ದೆ. ಈ ಭವಿಷ್ಯವಾಣಿ ನನ್ನ ಬಗ್ಗೆ ಪ್ರಕಟಿಸಲಾಗಿದೆ ಎಂದು ನಾನು ಮೃತನಾಗುವ ತನಕ ಅಲ್ಲಾಹನಿಂದ ನನಗೆ ತಿಳಿಸಲ್ಪಡದಿದ್ದರೂ ನನ್ನ ಕಾಲಾವಧಿಯಲ್ಲಿ ನಡೆದ ಘಟನೆಗಳು ತಾನಾಗಿ ಪ್ರಕಟಿಸುವುವು ಈ ಭವಿಷ್ಯವಾಣಿಗಳು ನನ್ನ ಮೂಲಕ ಮತ್ತು ನನ್ನ ಕಾಲದಲ್ಲಿ ಈಡೇರಿದೆ ಎಂದು. ಆದುದರಿಂದ ನಾನು ಅವುಗಳನ್ನು ಸತ್ಯಪಡಿಸುವವನಾಗಿದ್ದೇನೆ ಎಂದು. ಆದರೆ ಅಲ್ಲಾಹನು ತನ್ನ ಇಚ್ಛೆ ಪ್ರಕಾರ ಈ ವಿಷಯವನ್ನು ಬಹಿರಂಗಗೊಳಿಸಿದನು ಮತ್ತು ನನಗೆ ತಿಳಿಸಿದನು ಮುಸ್ಲಿಹ್ ಮೌಊದ್‌ರಿಗೆ ಸಂಬಂಧಿಸಿದ ಭವಿಷ್ಯವಾಣಿ ನನ್ನ ಕುರಿತಾಗಿದೆ ಎಂದು.

ಹಝ್ರತ್ ಮುಸ್ಲಿಹ್ ಮೌಊದ್(ರ) ಕೆಲವು ಭವಿಷ್ಯವಾಣಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಉದಾಹರಣೆಗೆ **"ವೋ ತೀನ್ ಕೋ ಚಾರ್ ಕರ್‍ನೇವಾಲಾ ಹೋಗಾ.** (ಅವನು ಮೂರನ್ನು ನಾಲ್ಕು ಮಾಡುವವನು). ಅದೇ ರೀತಿ ಇನ್ನೊಂದು ಭವಿಷ್ಯವಾಣಿ **"ದೋಶಂಬ ಮುಬಾರಕ್ ದೋಶಂಬ"** (ಸೋಮವಾರ ಅನುಗ್ರಹಭರಿತ ಸೋಮವಾರ) ಎಂಬುದು. ಈ ಎರಡು ಭವಿಷ್ಯವಾಣಿಗಳ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮೂರನ್ನು ನಾಲ್ಕು ಮಾಡುವವನು ಎಂಬ ಭವಿಷ್ಯವಾಣಿ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಭಾವಿಸಿದ್ದರು. ಮೂರು ಪುತ್ರರ ನಂತರ ನಾಲ್ಕನೆಯ ಪುತ್ರನಾಗುವೆನು ಎಂದು. ಆದರೆ ನನ್ನ ಅಭಿಪ್ರಾಯದಲ್ಲಿ – ಇಲ್‌ಹಾಮ್‌ನಲ್ಲಿ ಪುತ್ರರ ಬಗ್ಗೆ ಪ್ರಸ್ತಾಪಿಸಲಾಗಿಲ್ಲ. ಈ ಇಲ್‌ಹಾಮ್ ಜನನದ ವರ್ಷವನ್ನು ಸೂಚಿಸುತ್ತದೆ. ಭವಿಷ್ಯವಾಣಿ 1886ರಲ್ಲಿ ಪ್ರಕಟಗೊಂಡಿತು. ನಾನು 1889ರಲ್ಲಿ ಜನಿಸಿದೆ. ಆದುದರಿಂದ ನಾನು ನಾಲ್ಕನೆಯ ವರ್ಷದಲ್ಲಿ ಜನಿಸುವೆನೆಂದು ಇದರಲ್ಲಿ ಸೂಚಿಸಲಾಗಿದೆ. **"ದೋಶಂಬ ಮುಬಾರಕ್ ದೋಶಂಬ"** ಈ ಭವಿಷ್ಯವಾಣಿಯ ವ್ಯಾಖ್ಯಾನ ನನ್ನ ಅಭಿಪ್ರಾಯದಲ್ಲಿ ಹೀಗೆ– ಸೋಮವಾರವು ವಾರದ ಮೂರನೆಯ ದಿನವಾಗಿದೆ. (ಇಸ್ಲಾಮೀ ಕಾಲನಿರ್ಣಯ ಪ್ರಕಾರ ಶನಿವಾರ ವಾರದ ಮೊದಲನೆಯ ದಿನ) ಆಧ್ಯಾತ್ಮಿಕ ವ್ಯವಸ್ಥೆಯಲ್ಲಿ ಪ್ರವಾದಿಗಳ ಮತ್ತು ಖಲೀಫರ ಕಾಲ ಬೇರೆ ಬೇರೆಯಾಗಿರುತ್ತದೆ. ಈ ರಿತಿಯಲ್ಲಿ ನೋಡಿದರೆ ಮೊದಲನೆಯ ಕಾಲಘಟ್ಟ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರದ್ದಾಗಿದೆ. ಎರಡನೆಯ ಕಾಲಘಟ್ಟ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರದ್ದಾಗಿದೆ. ಮೂರನೆಯ ಕಾಲಘಟ್ಟ ನನ್ನದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಲಭಿಸಿದ ಇನ್ನೊಂದು ಇಲ್‌ಹಾಮ್ ಸಹ ಇದನ್ನು ಸ್ಥಿರೀಕರಿಸುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ **"ಫಝ್ಲೇ ಉಮರ್"** ಎಂಬ ಇನ್ನೊಂದು ಇಲ್‌ಹಾಮ್ ಸಹ ಉಂಟಾಗಿತ್ತು. ಹಝ್ರತ್ ಉಮರ್(ರ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಥಮ ಸ್ಥಾನದ ನಂತರ ಮೂರನೆಯ ಸ್ಥಾನದಲ್ಲಿದ್ದಾರೆ. ಒಟ್ಟಿನಲ್ಲಿ ಈ ಭವಿಷ್ಯವಾಣಿ ಸೂಚಿಸುವುದೇನೆಂದರೆ ಮುಸ್ಲಿಹ್ ಮೌಊದ್ ಅಲ್ಲಾಹನಿಂದ ಧರ್ಮದ ಸೇವೆಗೋಸ್ಕರ ಮೂರನೆಯವರಾಗಿ ನಿಯೋಜಿಸಲ್ಪಡುವರು. ಪವಿತ್ರ ಖುರ್‌ಆನಿನ ಕೆಲವು ವಚನಗಳು ಬೇರೆ ವಚನಗಳನ್ನು ವ್ಯಾಖ್ಯಾನಿಸುವ ಹಾಗೆ **ಫಝ್ಲೇ ಉಮರ್** ಎಂಬ ಇಲ್‌ಹಾಮ್ **ದೋಶಂಬ ಮುಬಾರಕ್ ದೋಶಂಬ** ಎಂಬ ಇಲ್‌ಹಾಮನ್ನು ವ್ಯಾಖ್ಯಾನಿಸಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಪುನಃ ಹೀಗೆ ಹೇಳುತ್ತಾರೆ: ಮುಬಾರಕ್ ದೋಶಂಬ ಎಂಬ ಇಲ್‌ಹಾಮ್ ಬೇರೆ ಒಂದು ವಿಷಯವನ್ನು ಸಹ ಸೂಚಿಸುತ್ತದೆ. 1934ರಲ್ಲಿ ಸರಕಾರದ ಒಂದು ಆದೇಶದ ಕಾರಣದಿಂದ ಜಮಾಅತಿನ ವಿರುದ್ಧ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳುವ ಯೋಜನೆಗಳಿದ್ದುವು. ಮತ್ತು ಅಹ್‌ರಾರಿಗಳ ಉಪಟಳಗಳು ಪ್ರಾರಂಭವಾಗಿದ್ದುವು. ಈ ಕಾರಣದಿಂದ ಅಲ್ಲಾಹನು ತಹ್‌ರೀಕ್ ಜದೀದ್ ಅಭಿಯಾನದ ಯೋಚನೆ ನನ್ನ ಹೃದಯದಲ್ಲಿ ಉಂಟಾಗುವಂತೆ ಮಾಡಿದನು. ಇದರ ಪ್ರಥಮ ಕಾಲಮಿತಿ ಹತ್ತು ವರ್ಷಗಳೆಂದು ನಿಗದಿಪಡಿಸಲಾಗಿತ್ತು ಮನುಷ್ಯನು ತ್ಯಾಗ ಮಾಡುವಾಗ ತ್ಯಾಗದ ನಂತರ ಒಂದು ಈದ್ ಬರುತ್ತದೆ. ನೀವು ನೋಡಿರಿ ರಮಝಾನಿನ ಉಪವಾಸ ಮಾಡಿದ ನಂತರ ಈದ್ ದಿನ ಬರುತ್ತದೆ. ತಹ್‌ರೀಕ್ ಜದೀದ್ ಹತ್ತು ವರ್ಷ ಪೂರೈಸಿ ನಂತರ ಪ್ರಾರಂಭವಾಗುವ ಹನ್ನೊಂದನೆ ವರ್ಷ ಈದ್ ಆಚರಿಸುವ ವರ್ಷವಾಗಿದೆ. ಈ ಹನ್ನೊಂದನೆ ವರ್ಷ ಸೋಮವಾರದಂದು ಪ್ರಾರಂಭವಾಯಿತು. ಸೋಮವಾರವನ್ನು ದೋಶಂಬ ಎಂದು ಹೇಳುತ್ತಾರೆ. ಅಲ್ಲಾಹನು ಈ ಇಲ್‌ಹಾಮ್ ಮೂಲಕ ಒಂದು ಶುಭವಾರ್ತೆ ನೀಡಿದ್ದನು. ಒಂದು ಕಾಲಘಟ್ಟದಲ್ಲಿ ಇಸ್ಲಾಮ್ ಬಹಳ ಬಲಹೀನವಾಗುವುದು. ಆಗ ಇಸ್ಲಾಮಿನ ಪ್ರಚಾರಕ್ಕೋಸ್ಕರ ಒಂದು ಮಹತ್ವಪೂರ್ಣ ತಬ್ಲೀಗ್ ವ್ಯವಸ್ಥೆ ಸ್ಥಾಪಿತವಾಗುವುದು. ಅದು ತನ್ನ ಪ್ರಥಮ ಹಂತ ಪೂರ್ಣಗೊಳಿಸಿ ಎರಡನೆಯ ಹಂತ ಪ್ರಾರಂಭಗೊಳಿಸುವಾಗ ಜಮಾಅತಿಗೆ ಅನುಗ್ರಹ ಭರಿತವಾಗುವುದು.

ಒಂದು ದೀರ್ಘ ಸ್ವಪ್ನವನ್ನು ವಿವರಿಸಿದ ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ತಾನು ಮುಸ್ಲಿಹ್ ಮೌಊದ್ ಎಂದು ಪ್ರಕಟಿಸಿದರು. ಅದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸ್ವಪ್ನದಲ್ಲಿ ನನ್ನ ನಾಲಗೆಯಲ್ಲಿ ಈ ವಾಕ್ಯ ಜಾರಿಗೊಂಡಿತು: **ಅನಲ್ ಮಸೀಹುಲ್ ಮೌಊದ್; ಮಸೀಲುಹೂ ವ ಖಲೀಫತುಹು.** (ನಾನು ಮಸೀಹ್ ಮೌಊದ್, ಅವರ ಮಸೀಲ್ ಮತ್ತು ಖಲೀಫ). ಸ್ವಪ್ನದಲ್ಲಿಯೇ

ನಾನು ಭಾವಿಸಿದೆ, ನನ್ನ ನಾಲಗೆಯಲ್ಲಿ ವಿಚಿತ್ರ ಶಬ್ದಗಳು ಜಾರಿಗೊಂಡಿವೆ ಎಂದು. ಅನಂತರ ಕೆಲವು ಜನರು ಈ ಸ್ವಪ್ನವನ್ನು ಆಲಿಸಿದಾಗ ಹೇಳಿದರು: ಮುಸ್ಲಿಹ್ ಮೌಊದ್ ಮಸೀಹೀ ನಫ್ಸ್ ಹೊಂದುವರೆಂದು 1886 ಫೆಬ್ರವರಿ 20ರ ಪ್ರಕಟಣೆ ಪತ್ರಿಕೆಯಲ್ಲಿದೆ. ಅದರಲ್ಲಿ ಹೀಗೆ ಬರೆದಿತ್ತು. **"ಓ ದುನ್‌ಯಾಮೇ ಆಯೇಗಾ, ಅಪ್ನೇ ಮಸೀಹೀ ನಫ್ಸ್ ಔರ್ ರೂಹುಲ್ ಹಖ್ ಕಿ ಬರ್‌ಕತ್‌ಸೆ ಬಹುತೊಂ ಕೊ ಬೀಮಾರಿಯೋಂ ಸೆ ಸಾಫ್ ಕರೇಗಾ"** (ಅವನು ಲೋಕಕ್ಕೆ ಬಂದು ತನ್ನ ಮಸೀಹೀ ನಫ್ಸ್ ಮತ್ತು ರೂಹುಲ್ ಹಖ್‌ನ ಅನುಗ್ರಹಗಳ ಮೂಲಕ ಅನೇಕರ ರೋಗಗಳನ್ನು ಉಪಶಮನ ಗೊಳಿಸುವನು). ರೂಹುಲ್ ಹಖ್ ಎಂದರೆ ತಬ್ಲೀಗಿನ ಆತ್ಮವಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಲೋಕದಾದ್ಯಂತ ಇಸ್ಲಾಮಿನ ತಬ್ಲೀಗ್ ಮಾಡುವುದಕ್ಕೆ ಅಸ್ತಿಭಾರ ಹಾಕಿದರು. ಲೋಕದ ಹೃದಯಗಳನ್ನು ಬಹುದೇವಾರಾಧನೆಯಿಂದ ಬಿಡಿಸಿದರು. ಹಝ್ರತ್ ಮುಸ್ಲಿಹ್ ಮೌಊದ್ ಹೇಳುತ್ತಾರೆ: ನಾನು ಸ್ವಪ್ನದಲ್ಲಿ ಕಂಡೆ, ನಾನು ವೇಗವಾಗಿ ನಡೆಯುತ್ತಾ, ಇಲ್ಲ ಓಡುತ್ತಾ ಇದ್ದೇನೆ. ನೆಲ ನನ್ನ ಪಾದಗಳ ಹಿಂದಿನಿಂದ ದಾಟಿ ಹೋಗುತ್ತಾ ಇದೆ.

ಭವಿಷ್ಯವಾಣಿಯಲ್ಲಿ **"ಓ ಜಲ್ದ್ ಜಲ್ದ್ ಬಡೇಗಾ"** ಎಂದಿದೆ. (ಅವನು ಬೇಗ ಬೇಗನೆ ಬೆಳೆಯುವನು ಎಂದಿದೆ). ನಾನು ಸ್ವಪ್ನದಲ್ಲಿ ಕಂಡೆನು ನಾನು ಕೆಲವು ವಿದೇಶಗಳಿಗೆ ಹೋದೆನು ಅಲ್ಲಿ ನಾನು ನನ್ನ ಕೆಲಸ ಮುಕ್ತಾಯಗೊಳಿಸದೆ ಮುಂದೆ ಸಾಗಲು ನಿರ್ಧರಿಸಿದೆನು. ನಾನು ಸ್ವಪ್ನದಲ್ಲಿ ಹೀಗೆ ಹೇಳಿದೆನು: ಓ ಅಬ್ದುಶ್ಶಕೂರ್ ನಾನು ಈಗ ಮುಂದೆ ಸಾಗುತ್ತೇನೆ. ನಾನು ಪ್ರಯಾಣದಿಂದ ಮರಳಿ ಬರುವಾಗ ನೋಡುವೆನು, ನೀನು ಏಕದೇವ ವಿಶ್ವಾಸವನ್ನು (ತೌಹೀದ್) ಸ್ಥಾಪಿಸಿರುವೆಯೋ ಬಹುದೇವಾರಾಧನೆ (ಶಿರ್ಕ್) ಅಳಿಸಿ ಬಿಟ್ಟಿರುವೆಯೋ ಇಸ್ಲಾಮ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಹೃದಯದಲ್ಲಿ ತುಂಬಿರುವೆಯೋ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದೊರೆತ ಸಂದೇಶವಾಣಿಯಲ್ಲಿ **"ಓ ಝುಮೀನ್ ಕೆ ಕಿನಾರೋಂ ತಕ್ ಶುಹ್‌ರತ್ ಪಾಯೇಗಾ"** ಮುಸ್ಲಿಹ್ ಮೌಊದ್ ಭೂಮಿಯ ಎಲ್ಲೆಗಳ ತನಕ ಪ್ರಸಿದ್ಧಿ ಗಳಿಸುವರು ಎಂದು ಸೂಚಿಸಲಾಗಿದೆ. ಇದರ ಅರ್ಥ ತಬ್ಲೀಗ್ ಕೆಲಸವನ್ನು ಅವರು ವಿಫುಲ ಗೊಳಿಸಲಿರುವರು ಎಂದಾಗಿದೆ. ಈ ಭವಿಷ್ಯವಾಣಿ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಕಾಲದಲ್ಲಿ ಖಂಡಿತವಾಗಿಯೂ ಬಹಳ ಭವ್ಯವಾಗಿ ಈಡೇರಿತೆಂದು ನಾವು ಕಾಣುತ್ತೇವೆ. ಇದೇ ರೀತಿ ಮುಸ್ಲಿಹ್ ಮೌಊದ್ ಭವಿಷ್ಯವಾಣಿಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಿಗೆ ಸರಿಹೊಂದುವ ಅನೇಕ ಸಂಗತಿಗಳು ವಿವಿಧ ರೂಪದಲ್ಲಿ ಅವರಿಗೆ ಕಾಣಿಸಲ್ಪಟ್ಟ ಸ್ವಪ್ನದಲ್ಲಿ ಪ್ರಕಟಪಡಿಸಲಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮುಸ್ಲಿಹ್ ಮೌಊದ್‌ರಿಗೆ ಸಂಬಂಧಿಸಿ ಪ್ರಸ್ತಾಪಿಸಿದ ಭವಿಷ್ಯವಾಣಿಗಳು ಹೇಗೆ ಈಡೇರಿದುವು ಎನ್ನುವುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾನು ಒಮ್ಮೆ ಅಮ್ಮಾಜಾನರ ಕೋಣೆಯಲ್ಲಿ ನಮಾಝ್ ಸಮಯದ ಪ್ರತೀಕ್ಷೆಯಲ್ಲಿ ಅತ್ತಿತ್ತ ನಡೆಯುತ್ತಾ ಇದ್ದಾಗ ಮಸ್‌ಜಿದ್‌ನಿಂದ ಉಚ್ಛ ಧ್ವನಿಯಲ್ಲಿ ಹೀಗೆ ಹೇಳುವುದು ನನಗೆ ಕೇಳಿಸಿತು– ಒಬ್ಬ ಹುಡುಗನನ್ನು ಮುಂದೆ ಇರಿಸಿ ಜಮಾಅತನ್ನು ನಾಶ ಮಾಡುತ್ತಿದ್ದಾರೆ ಎಂದು. ಶತ್ರುಗಳ ಈ ಮಾತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ **"ಓ ಜಲ್ದ್ ಜಲ್ದ್ ಬಡೇಗಾ"** – ಅವನು ಬೇಗ ಬೇಗನೆ ಬೆಳೆಯುವನು ಎಂಬ ಇಲ್‌ಹಾಮನ್ನು ಸತ್ಯಪಡಿಸುತ್ತದೆ. ಅಲ್ಲಾಹನು ನನ್ನನ್ನು ಎಷ್ಟು ಬೇಗನೆ ಬೆಳೆಸಿದನೆಂದರೆ ಶತ್ರುಗಳು ಆಶ್ಚರ್ಯ ಚಕಿತರಾದರು. ಕೆಲವು ತಿಂಗಳ ಹಿಂದೆ ನನ್ನನ್ನು 'ಹುಡುಗ' ಎಂದು ಹೇಳಿದವರು ನನ್ನನ್ನು ಒಬ್ಬ ಅನುಭವಶಾಲಿ ತಂತ್ರಗಾರ ಎಂದು ಹೇಳಿ ನಿಂದಿಸುತ್ತಿದ್ದರು. ಅವರ ಅಭಿಪ್ರಾಯ ಸಂಪೂರ್ಣ ಬದಲಾವಣೆಗೊಂಡಿತು. ಜಮಾಅತ್‌ಗೆ ತೂತು ಕೊರೆಯುವವರು ನನ್ನ ಬಾಲ್ಯ ಕಾಲದಲ್ಲಿಯೇ ನನ್ನ ಕೈಗಳಿಂದಲೇ ಸೋತು ಹೋಗುವಂತೆ ಅಲ್ಲಾಹನು ಮಾಡಿದನು.

ಆ ದಿನ ದಾಟಿ ಹೋಯಿತು. ಈ ದಿನ ಉದಿಸಿದೆ. ನೋಡುವವರು ನೋಡುತ್ತಾ ಇದ್ದಾರೆ. ನನ್ನ ನೇತೃತ್ವಕ್ಕೆ ನೀಡಲಾದ ಜಮಾಅತಿನ ಜನರ ಸಂಖ್ಯೆ ಆಗ ಎಷ್ಟು ಇತ್ತೋ ಅದರ ನೂರಾರು ಪಟ್ಟು ಹೆಚ್ಚು ಸಂಖ್ಯೆಯಲ್ಲಿ ಈಗ ಇದ್ದಾರೆ. ಯಾವ ದೇಶಗಳಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೆಸರು ತಲಪಿತ್ತೋ ಅದಕ್ಕಿಂತ ಎಷ್ಟೋ ಹೆಚ್ಚಿನ ದೇಶಗಳಿಗೆ ಅವರ ಹೆಸರು ಈಗ ತಲಪಿದೆ. ಅಲ್ಲಾಹನು ಹೇಳಿದ **"ಓ ಜಲ್ದ್ ಜಲ್ದ್ ಬಡೇಗಾ ಔರ್ ಖುದಾಕಾ ಸಾಯ ಉಸ್‌ಕೆ ಸಿರ್ ಪರ್ ಹೋಗಾ"** (ಅವನು ಬೇಗ ಬೇಗನೆ ಬೆಳೆಯುವನು. ಅಲ್ಲಾಹನ ನೆರಳು ಅವನ ತಲೆಯ ಮೇಲಿರುವುದು) ಎಂಬ ಭವಿಷ್ಯವಾಣಿ ಎಷ್ಟು ಭವ್ಯವಾಗಿ ಈಡೇರಿದೆ ಕಠಿಣ ಶತ್ರು ಸಹ ಅದನ್ನು ಅಲ್ಲಗಳೆಯಲಾರನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಭವಿಷ್ಯವಾಣಿ ಮಹತ್ವಪೂರ್ಣವಾದುದೆಂದು ಹೇಳಿದ ಬಗ್ಗೆ ನಾನು ಪ್ರಾರಂಭದಲ್ಲಿ ಹೇಳಿದ್ದೇನೆ. ಇದೊಂದು ಭವಿಷ್ಯವಾಣಿ ಮಾತ್ರವಲ್ಲ ಒಂದು ಮಹತ್ವಪೂರ್ಣ ದೃಷ್ಟಾಂತವಾಗಿದೆ ಎಂದು ಅವರು ಹೇಳಿದ್ದರು. ಈ ಭವಿಷ್ಯವಾಣಿ ಪ್ರಕಾರ ಒಂಭತ್ತು ವರ್ಷದೊಳಗೆ ಮಗು ಜನಿಸಬೇಕಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದರ ಬಗ್ಗೆ ಹೀಗೆ ಹೇಳುತ್ತಾರೆ: "ಒಂಭತ್ತು ವರ್ಷ ನಾನು ಜೀವಿಸುವೆನೋ ಎಂದು ನನಗೆ ತಿಳಿಯದು. ಈ ಅವಧಿಯಲ್ಲಿ ಒಂದು ಮಗು ಹುಟ್ಟುವುದೋ ಇಲ್ಲವೋ ಎಂದು ಸಹ ತಿಳಿಯಲು ಸಾಧ್ಯವಿಲ್ಲ. ಹುಟ್ಟುವ ಮಗು ಗಂಡೆಂದು ಊಹಿಸಲು ಸಹ ಸಾಧ್ಯವಿಲ್ಲ. ಹೀಗಿರುವಾಗ ಒಬ್ಬ ಹುಡುಗ ಜನಿಸುವನು ಅವನು ಇಸ್ಲಾಮಿಗೆ ವೈಭವ ದೊರಕಿಸಿ ಕೊಡುವನು ಎಂದು ಭವಿಷ್ಯ ನುಡಿಯಲಾಗಿತ್ತು."

ಈ ಭವಿಷ್ಯವಾಣಿ ಪ್ರಕಟಿಸಿದ ಕಾಲ ಹೇಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಶತ್ರುಗಳು ನಾಲ್ಕು ದಿಕ್ಕುಗಳಿಂದಲೂ ಆಕ್ರಮಣ ಮಾಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನಗೆ ಅಲ್ಲಾಹನಿಂದ ಇಲ್‌ಹಾಮ್ ಅವತೀರ್ಣವಾಗುತ್ತಿದೆ ಎಂದು ಹೇಳಿದ ಕಾರಣ ಈ ವಿರೋಧ ಪ್ರಾರಂಭವಾಗಿತ್ತು. ಆ ಸಮಯದಲ್ಲಿ ಮುಜದ್ದಿದ್ ಎಂಬ ವಾದವಾಗಲಿ ಅಲ್ಲಾಹನಿಂದ ತಾನು ನಿಯೋಜಿತನಾಗಿದ್ದೇನೆ ಎಂಬ ವಾದವಾಗಲಿ ಅವರಿಗೆ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಒಬ್ಬ ಹುಡುಗ ಜನಿಸುವ ಬಗ್ಗೆ ಮತ್ತು ಅವನ ಉನ್ನತ ಗುಣಗಳ ಬಗ್ಗೆ ಅವರು ಭವಿಷ್ಯವಾಣಿ ಪ್ರಕಟಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಬ್ಬ ಸಹಾಯಕನ ಕೀರ್ತಿ ಬಗ್ಗೆ ಹೇಳುವಾಗ ಅದರ ಅರ್ಥ ಅವನ ಯಜಮಾನ ಕೀರ್ತಿ ಪಡೆಯುವನೆಂದಾಗಿದೆ. ಅಲ್ಲಾಹನು 'ಅವನು ಭೂಮಿಯ ಎಲ್ಲೆಗಳ ತನಕ ಪ್ರಸಿದ್ಧಿ ಗಳಿಸುವನು' ಎಂದು ಹೇಳಿದರ ಅರ್ಥ ಅವನ ಯಜಮಾನ ಪ್ರಸಿದ್ಧಿಯನ್ನು ಗಳಿಸುವನೆಂದಾಗಿದೆ. ಎಂದರೆ ಅವನ ಮೂಲಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೆಸರು ಲೋಕದಾದ್ಯಂತ ಪ್ರಸಿದ್ಧಿಯನ್ನು ಪಡೆಯುವುದು ಎಂದಾಗಿದೆ. ಈಗ ನೋಡಿರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಅಫ್‌ಘಾನಿಸ್ಥಾನದಲ್ಲಿ

ಮಾತ್ರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶ ಮಹತ್ವಪೂರ್ಣವಾಗಿ ತಲಪಿತ್ತು. ಇತರ ದೇಶಗಳಲ್ಲಿ ಕೇವಲ ವದಂತಿಗಳು ತಲಪಿದ್ದುವು. ಹಝ್ರತ್ ಮುಸ್ಲಿಹ್ ಮೌಊದ್(ರ)ರನ್ನು ಅಲ್ಲಾಹನು ಖಲೀಫರನ್ನಾಗಿ ಮಾಡಿದಾಗ ಏನಾಯಿತೆಂದರೆ ಅವರು ಹೇಳುತ್ತಾರೆ: ಸುಮಾಟ್ರಾ, ಜಾವಾ, ಸ್ಟ್ರೆಟ್ ಸೆಟ್ಲ್‌ಮೆಂಟ್ಸ್, ಚೀನ, ಮೌರೀಷಸ್, ಆಫ್ರಿಕದ ದೇಶಗಳು, ಈಜಿಪ್ಟ್, ಪೆಲೆಸ್ತೀನ್, ಇರಾನ್ ಮತ್ತು ಅರಬ್ ದೇಶಗಳು ಮತ್ತು ಯುರೋಪಿನ ದೇಶಗಳಲ್ಲಿ ಅಹ್ಮದಿಯ್ಯತ್ ವ್ಯಾಪಿಸಿತು.

ಭವಿಷ್ಯವಾಣಿಯಲ್ಲಿ ಹೀಗೆ ಸಹ ಹೇಳಲಾಗಿತ್ತು. 'ಅವನು ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ತುಂಬಿಸಲ್ಪಡುವವನು' ಎಂದು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಇಚ್ಛಿಸಿದನು, ಭವಿಷ್ಯವಾಣಿ ಪ್ರಕಾರ ಈ ಕಾಲದಲ್ಲಿ ಒಬ್ಬನಿಗೆ ತನ್ನ ವಚನದ ರಹಸ್ಯಾರ್ಥಗಳನ್ನು ದಯಪಾಲಿಸಿದನು. ಅವನ ಜೊತೆ ರೂಹುಲ್ ಹಖ್ ಇದೆ. ಆಂತರಿಕ ಮತ್ತು ಬಾಹ್ಯ ವಿದ್ಯೆಯನ್ನು ತುಂಬಲಾಗಿದೆ. ಶತ್ರುಗಳ ಸಾಂಸ್ಕೃತಿಕ ಆಕ್ರಮಣಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವ್ಯಾಖ್ಯಾನ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪವಿತ್ರ ಖುರ್‌ಆನಿಗೆ ನೀಡಿದ ವ್ಯಾಖ್ಯಾನ ಪ್ರಕಾರ ಎದುರಿಸಲಾಗುತ್ತಿದೆ. ಇಸ್ಲಾಮಿನ ಸಂರಕ್ಷಣೆಯ ಕೆಲಸ ಮಾಡಲಾಗು ತ್ತಿದೆ. ಅಲ್ಲಾಹನು ಈ ರೀತಿಯಾಗಿ ತನ್ನ ಕೆಲಸ ಪೂರ್ತಿಗೊಳಿಸಿರುವನು. ಅವನು ನನ್ನ ಬರಹಗಳಿಗೆ ಅಂಗೀಕಾರ ನೀಡಿದನು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ನನಗೆ ತಿಳಿಸಿಕೊಡುವ ತನಕ ನಾನು ಸುಮ್ಮನಿದ್ದೆ. ಅಲ್ಲಾಹನು ತಿಳಿಸಿಕೊಟ್ಟಾಗ ನಾನು ಇದನ್ನು ಹೇಳುತ್ತಿದ್ದೇನೆ. ಅಷ್ಟು ಮಾತ್ರವಲ್ಲ, ನೀನು ಜನರೊಂದಿಗೆ ಹೇಳು ಎಂದು ಸಹ ಆಜ್ಞಾಪಿಸಿರುವನು. ಈ ಭವಿಷ್ಯವಾಣಿ ಎಲ್ಲಾ ರೀತಿಗಳಲ್ಲೂ ನನ್ನ ಮೂಲಕ ಈಡೇರಿದೆ. ಅಲ್ಲಾಹನು ನನ್ನೊಂದಿಗೆ ಆದೇಶಿಸಿದನಲ್ಲದೆ ತನ್ನ ಅನುಗ್ರಹದಿಂದ ಎಂತಹ ಪರಿಸ್ಥಿತಿ ಉಂಟು ಮಾಡಿದನೆಂದರೆ ಅವು ಭವಿಷ್ಯವಾಣಿಯ ಸತ್ಯತೆಗೆ ಸಾಕ್ಷ್ಯಾಧಾರಗಳಾಗಿವೆ. ಆಕಾಶದಲ್ಲಿ ಚಂದ್ರನು ಬೆಳಗುತ್ತಿರುವಾಗ ಸುತ್ತುಮುತ್ತಲೂ ನಕ್ಷತ್ರಗಳು ಸಹ ಇರುತ್ತವೆ. ಅದೇ ರೀತಿ ಈ ದಿನಗಳಲ್ಲಿ ಅನೇಕರು ಸ್ವಪ್ನಗಳನ್ನು ಕಂಡಿದ್ದಾರೆ. ಅದರಲ್ಲಿ ನನ್ನ ಸ್ವಪ್ನವನ್ನು ಪುನರಾವರ್ತಿಸಲಾಗಿದೆ. (ಅನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಜಮಾಅತಿನ ಕೆಲವು ಸಜ್ಜನರು ಕಂಡ ಸ್ವಪ್ನ ಗಳನ್ನೂ ತನ್ನ ಸ್ವಂತ ಸ್ವಪ್ನವನ್ನೂ ಇಲ್‌ಹಾಮ್‌ಗಳನ್ನೂ ವಿವರಿಸಿದರು.)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಅನೇಕ ಸಲ ತನ್ನ ಅದೃಶ್ಯ ಕಾರ್ಯಗಳನ್ನೂ ದೃಷ್ಟಾಂತಗಳನ್ನೂ ಪ್ರಕಟಿಸಿ, ಮುಸ್ಲಿಹ್ ಮೌಊದ್ ರೂಹುಲ್ ಹಖ್‌ನಿಂದ ತುಂಬಿಸಲ್ಪಡುವವನು ಎಂಬ ಭವಿಷ್ಯವಾಣಿಯನ್ನು ಸತ್ಯಪಡಿಸಿರುವನು.

ಜನರು ಹೇಳುತ್ತಾರೆ: ಸ್ನೇಹಿತರು ಹಿಂದೆಯೇ ನನ್ನನ್ನು ಮುಸ್ಲಿಹ್ ಮೌಊದ್ ಭವಿಷ್ಯವಾಣಿಯನ್ನು ಸತ್ಯಪಡಿಸುವವನೆಂದು ಹೇಳುತ್ತಿದ್ದರು. ನಾನಾದರೋ ಈಗ ಆ ರೀತಿ ವಾದಿಸುತ್ತಿರುವೆನು. ಇದರ ಉದ್ದೇಶವೇನು? ಎಂದು ಕೇಳುತ್ತಿದ್ದಾರೆ. ಇದರ ಉದ್ದೇಶ ಪವಿತ್ರ ಖುರ್‌ಆನ್ ಹೇಳಿದ ಹಾಗೆಯೇ ಇದೆ. **ಮಾ ಕಾನಲ್ಲಾಹು ಲಿಯುಝೀಅ ಈಮಾನಕುಮ್.** ಪ್ರವಾದಿ ಆಗಮಿಸಿದ ನಂತರ ಓರ್ವ ವಾಗ್ದತ್ತ ವ್ಯಕ್ತಿಯನ್ನು ನಿಯಮಿಸುವಾಗ ಅವರು ಸ್ಥಾಪಿಸಿದ ಜಮಾಅತ್ ನಾಶವಾಗುವುದನ್ನು ಅಲ್ಲಾಹನು ಇಚ್ಛಿಸುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರ ಕಾಲದಲ್ಲಿ ಮುಸ್ಲಿಹ್ ಮೌಊದ್ ಆಗಮಿಸಲಿಕ್ಕಿತ್ತು. ಅಲ್ಲಾಹನು ಮೊದಲು ಅವರನ್ನು ಖಲೀಫರನ್ನಾಗಿ ಮಾಡಿ ಸತ್ಯವಿಶ್ವಾಸಿಗಳ ಬೈಅತ್ ಪಡೆಯುವಂತೆ ಮಾಡಿದನು, ಮತ್ತು ಭವಿಷ್ಯವಾಣಿ ಈಡೇರುವ ವ್ಯವಸ್ಥೆ ಮಾಡಿದನು. ಜಮಾಅತ್‌ಗೆ ವಾಸ್ತವಿಕ ವಿಷಯ ಸ್ಪಷ್ಟವಾದಾಗ ಮುಸ್ಲಿಹ್ ಮೌಊದ್‌ರೊಂದಿಗೆ ಅದನ್ನು ತಿಳಿಸಲು ಆಜ್ಞಾಪಿಸಿದನು. ಈ ರೀತಿ ಜಮಾಅತನ್ನು ಅವಿಶ್ವಾಸದಿಂದಲೂ ನಿರಾಕರಣೆಯ ಕಳಂಕದಿಂದಲೂ ರಕ್ಷಿಸಿದನು.

ಅಲ್ಲಾಹನು ಈ ಕಾಲದಲ್ಲಿಯೂ ಎಲ್ಲರ ವಿಶ್ವಾಸವನ್ನು ಸುರಕ್ಷಿತವಾಗಿರಿಸಲಿ. ಪ್ರತಿಯೊಬ್ಬ ಅಹ್ಮದಿಯ ವಿಶ್ವಾಸವನ್ನು ಸಂರಕ್ಷಿಸಲಿ. ಅವಿಶ್ವಾಸದ ಕಳಂಕದಿಂದ ರಕ್ಷಿಸಲಿ. ಜಮಾಅತಿನ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜ್ಞಾನದಿಂದ ಲಾಭ ಪಡೆಯ ಬೇಕು. ಉರ್ದು ಭಾಷೆಯಲ್ಲಿಯೂ ಬೇರೆ ಭಾಷೆಗಳಲ್ಲೂ ಸಾಹಿತ್ಯಗಳಿವೆ. ಅವುಗಳನ್ನು ಓದುವ ಭಾಗ್ಯವನ್ನು ಎಲ್ಲರಿಗೂ ನೀಡಲಿ – ಆಮೀನ್.

(ಖುತ್‌ಬದ ಕೊನೆಯಲ್ಲಿ ಹುಝೂರ್ ಮುಕರ್ರಮ್ ಸೂಫೀ ನಝೀರ್ ಅಹ್ಮದ್, ಮುಕರ್ರಮ್ ಮಿಯಾಂ ಮುಹಮ್ಮದ್ ಅಬ್ದುಲ್ಲಾ ಸಾಹೇಬರ ಪುತ್ರ. ಅವರ ಸದ್ಗುಣಗಳನ್ನು ಮತ್ತು ಅವರು ಮಾಡಿದ ಸೇವೆಯನ್ನು ವಿವರಿಸಿದರು. ಮತ್ತು ಜುಮುಅ ನಮಾಝ್ ನಂತರ ಅವರ ನಮಾಝೆ ಜನಾಝ ನಿರ್ವಹಿಸುವ ಬಗ್ಗೆ ಪ್ರಕಟಿಸಿದರು).

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 19-02-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon